ಎಂ.ವಿ.ಸಿ. 1016/2022,      ಪಿ.ಡಬ್ಲ್ಯೂ-1      ಹೆಸರುಃ ರಮೇಶ

**ದಿಃ12-11-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ಎದುರುದಾರರ ಪರ ಶ್ರೀ ಜಿ.ಎಸ್.ಎಸ್. ವಕೀಲರಿಂದಃ**

ನಾನು ಹೊಸದುರ್ಗದಲ್ಲಿ ಬಸ್‌ನ್ನು ಹತ್ತಿದ ನಂತರದಲ್ಲಿ ಸದರಿ ಬಸ್ಸು ಹೊಸದುರ್ಗವನ್ನು ಮದ್ಯಾಹ್ನ 1.30 ರಿಂದ 2 ಗಂಟೆ ಸಮಯದಲ್ಲಿ ಬಿಟ್ಟಿರುತ್ತದೆ. ಸದರಿ ಬಸ್ಸು ಹೊಸದುರ್ಗದಿಂದ ಚನ್ನಗಿರಿಗೆ ಹೋಗುತ್ತಿತ್ತು. ಸದರಿ ಬಸ್ಸಿನಲ್ಲಿ ಸುಮಾರು 20 ರಿಂದ 30 ಜನ ಇದ್ದರು. ನಾನು ಬಸ್ಸಿನಲ್ಲಿ ಹೋಗುತ್ತಿದ್ದ ಬಗ್ಗೆ ಟಿಕೇಟನ್ನು ತೆಗೆದುಕೊಂಡಿದ್ದೆನು. ಸದರಿ ಟಿಕೆಟ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಹೋಗುವ ಕಾಲೇಜಿನ ಅವಧಿ ಬೆಳಗ್ಗೆ 10 ರಿಂದ ಮದ್ಯಾಹ್ನ 3 ಗಂಟೆಯವರೆಗೂ ಇತ್ತು. ಅಪಘಾತ ಆದ ದಿನಾಂಕದಂದು ನಾನು ಬೇಗ ಮನೆಗೆ ಹೋಗುತ್ತಿದ್ದೆನು. ನಾನು ಹೋಗುತ್ತಿದ್ದ ಕೆ.ಎ.19-ಸಿ-2384 ರ ಬಸ್ಸಿಗೆ ಹೊಸದುರ್ಗದಿಂದ ಚನ್ನಗಿರಿಗೆ ಹೋಗಲು ರಹದಾರಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಿನದಂದು ಡೋರಿನಲ್ಲಿ ನಿಂತು ಪ್ರಯಾಣ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ನಾನೇ ಕೆಳಗೆ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿ ನಾನು ಬಸ್ಸನ್ನು ಇಳಿಯುವಾಗ ಒಂದು ಕಾಲನ್ನು ಕೆಳಗೆ ಇಟ್ಟಿದ್ದು, ಚಾಲಕನು ಏಕಾ ಏಕಿ ಬಸ್ಸನ್ನು ಚಾಲನೆ ಮಾಡಿದ ಕಾರಣ ಬಸ್ಸಿನ ಹಿಂದಿನ ಚಕ್ಕ ನನ್ನ ಕಾಲಿನ ಮೇಲೆ ಹಾದುಹೋಗಿರುತ್ತದೆ ಎಂದು ಹೇಳುತ್ತಾರೆ. ನಾನು ಮುಂದಿನ ಡೋರಿನಿಂದ ಇಳಿದಿರುತ್ತೇನೆ. ಮುಂದಿನ ಡೋರಿನ ಚಕ್ರಕ್ಕೂ ಮತ್ತು ಹಿಂದಿನ ಚಕ್ರಕ್ಕೂ ಸುಮಾರು 8 ರಿಂದ 10 ಅಡಿ ಅಂತರ ಇದೆ ಎಂದರೆ ಸರಿ. ಬಸ್ಸಿನ ಚಾಲಕ ಬಸ್ಸನ್ನು ನಿದಾನ ಮಾಡಲು ಹೋದಾಗ ಡೋರಿನಲ್ಲಿ ನಿಂತಿದ್ದ ನಾನು ಇಳಿಯಲು ಹೋಗಿ ಅಪಘಾತ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಸ್ವಂತ ಊರು ಮತ್ತೋಡು. ಸದರಿ ಗ್ರಾಮ ಹೊಸದುರ್ಗ ತಾಲ್ಲೂಕಿನಲ್ಲಿ ಬರುತ್ತದೆ. ಮತ್ತೋಡು ಗ್ರಾಮಕ್ಕೆ ರಾಮಗಿರಿಗಿಂತ ಹೊಳಲ್ಕೆರ ಹತ್ತಿರ ಆಗುತ್ತದೆ ಎಂದರೆ ಸರಿ. ನಾನು ಮತ್ತೋಡಿನಿಂದ ಹೊಸದುರ್ಗಕ್ಕೆ ಕಾಲೇಜಿಗೆ ಹೋಗುತ್ತಿದ್ದೆನು ಎಂದರೆ ಸರಿ. ಸಾಕ್ಷಿ ಮುಂದುವರೆದು ರಾಮಗಿರಿ ಗ್ರಾಮದ ನಮ್ಮ ಚಿಕ್ಕಮ್ಮನವರ ಮನೆಯಿಂದಲೂ ಹೋಗುತ್ತಿದ್ದೆನು ಎಂದು ಹೇಳುತ್ತಾರೆ. ನಾನು ಚಿಕಿತ್ಸೆ ಪಡೆದಿರುವ ಹೊಳಲ್ಕೆರೆಯ ಸಾರ್ವಜನಿಕ ಆಸ್ಪತ್ರೆ ಮತ್ತು ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆ ಸರ್ಕಾರಿ ಆಸ್ಪತ್ರೆಗಳು ಎಂದರೆ ಸರಿ. ನಮ್ಮ ಕುಟುಂಬಕ್ಕೆ ಆಹಾರ ಪಡಿತರ ಚೀಟಿ ಇದೆ. ಸರ್ಕಾರಿ ಆಸ್ಪತ್ರೆಯಲ್ಲಿ ನನಗೆ ಉಚಿತ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿ. ನಿಪಿ.9(1) ರಿಂದ 9(8)ರವರೆಗೆ ಸಂಬಂಧಿಸಿದ ವೈದ್ಯಕೀಯ ಬಿಲ್ಲುಗಳ ಕುರಿತಾಗಿ ಸಲಹಾ ಚೀಟಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ಹೆಚ್ಚಿನ ಪರಿಹಾರವನ್ನು ಪಡೆಯುವ ಸಲುವಾಗಿ ನಿಪಿ.9(1) ರಿಂದ 9(8) ರ ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಸರ್ಕಾರಿ ಆಸ್ಪತ್ರೆಯಲ್ಲಿ ಆಪರೇಷನ್ ಮಾಡಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ಬಿಡುಗಡೆಯ ಸಾರಾಂಶದಲ್ಲಿ ಆಂಕಲ್ ಫ್ರಾಕ್ಚರ್ ಎಂದು ಉಲ್ಲೇಖಿಸಿ ಮಾತ್ರೆ ಮಾತ್ರ ನೀಡಿರುತ್ತಾರೆ ಎಂದರೆ ಸರಿ.

3. ಅಪಘಾತದ ಸಮಯದಲ್ಲಿ ನನಗೆ 19 ವರ್ಷ ವಯಸ್ಸಾಗಿತ್ತು. ನಾನು ಚಿಕಿತ್ಸೆಗಾಗಿ ರೂ.3 ಲಕ್ಷ ಹಣವನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ತರುವಾಯದ ಚಿಕಿತ್ಸೆಗಾಗಿ ರೂ.1 ಲಕ್ಷ ಭರಿಸಿಲ್ಲ ಎಂದರೆ ಸರಿಯಲ್ಲ. ನಾನು ಚಿಕಿತ್ಸೆ ಪಡೆದಿರುವ ಬಗ್ಗೆ ನಿಪಿ.8 ಮತ್ತು 9 ರ ದಾಖಲೆಗಳನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಮೆಟ್ಟಿಲುಗಳನ್ನು ಹತ್ತಿಕೊಂಡು ಬಂದಿರುತ್ತೇನೆ ಎಂದರೆ ಸರಿ. ನಾನು ವಿದ್ಯಾಭ್ಯಾಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಬಸ್ಸಿನ ಬಾಗಿಲಲ್ಲಿ ನಿಂತಿದ್ದು, ಇಳಿಯಲು ಹೋದಾಗ ಗಾಯ ಮಾಡಿಕೊಂಡಿದ್ದು, ಹಾಗಾಗಿ 2 ನೇ ಎದುರುದಾರರು ಯಾವುದೇ ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ